‘ಅದೂ ಸರಿನೇ ನಿಮ್ಮ ಬಗ್ಗೆ ನಿಮ್ಮ ಹೆಸರೊಂದು ಬಿಟ್ಟು ಇನ್ನೇನು ಗೊತ್ತಿಲ್ಲ, ನಿಮ್ಮ ಗುಣ, ನಡತೆ ನಾನು ನೋಡಿದ್ದೇ, ನಿಮ್ಮ ಬಗ್ಗೆ ಹೇಳಬೇಕೆಂದಿದ್ದರೆ ಹೇಳಿ, ನೀವು ಯಾರೇ ಆಗಿದ್ದರೂ, ನಿಮ್ಮ ಹಿಂದಿನ ಕತೆ ಏನೇ ಇದ್ದರೂ ನಿಮ್ಮ ಕತೆ ಕೇಳಿ ನಿಮ್ಮ ಬಗ್ಗೆ ಇರುವ ಪ್ರೀತಿ, ವಿಶ್ವಾಸ, ಅಭಿಮಾನವಂತೂ ಕಡಿಮೆಯಾಗುವುದಿಲ್ಲ’. ಇಷ್ಟು ದಿನ ನುಂಗಿ ನೀರು ಕುಡಿದಿದ್ದ ಕಹಿ ನೆನಪುಗಳನ್ನು ರಾಜೇಶನೆದುರಿಗೆ ಬಿಚ್ಚಿಟ್ಟೆ, ಎಲ್ಲವೂ ಹೇಳಿಕೊಳ್ಳಬೇಕೆನಿಸಿತು.

***

ಹಲಸೂರಿನ ಪುರೋಹಿತ ಕೃಷ್ಣ ಭಟ್ಟರ ಮೊದಲ ಮಗಳು ಸುಶೀಲ. ಅಮ್ಮನೇ ಇಟ್ಟ ಹೆಸರು. ನನಗೆ ಹೆಸರಿಡುವವರೆಗೆ ಅಮ್ಮ ಜೀವಿಸಿದ್ದಿರಬೇಕು, ನಂತರ ಹಸಿ ಬಾಣಂತಿಗೆ ಯಾವುದೋ ಜ್ವರ ಬಂದು, ಸರಿಯಾದ ಆರೈಕೆಯಿಲ್ಲದೆ ಅಮ್ಮ ತೀರಿಕೊಂಡಳು. ಅಪ್ಪಯ್ಯ ಅಮ್ಮನ ವರ್ಷಾಂತಿಕದೊಳಗೆ ಮತ್ತೊಂದು ಮದುವೆ ಮಾಡಿಕೊಂಡರು. ನನಗೆ ಬುದ್ಧಿ ತಿಳಿದಾಗಿನಿಂದ ಮನೆಯಲ್ಲಿ ಅಪ್ಪಯ್ಯ, ಚಿಕ್ಕಮ್ಮ, ತಮ್ಮ, ತಂಗಿಯರಿದ್ದರು. ತಮ್ಮ, ತಂಗಿಯರು ‘ಅಮ್ಮ’ ಎಂದು ಕರೆಯುತ್ತಿದ್ದರೆ ನಾನೇಕೆ ಚಿಕ್ಕಮ್ಮ ಎಂದು ಕರೆಯಬೇಕೆಂದೂ, ಚಿಕ್ಕಮ್ಮ ತಮ್ಮ, ತಂಗಿಯರನ್ನು ಮಾತ್ರ ಏಕೆ ಪ್ರೀತಿಸುತ್ತಾರೆಂದು ತಿಳಿಯಲು ಹಲವು ವರ್ಷಗಳೇ ಬೇಕಾಯಿತು. ‘ನಮ್ಮ ಸುಶೀಲ ತೇಟು ಅಮ್ಮನ ಹಾಗೆಯೇ, ಗುಂಡು ಮುಖ, ಉದ್ದ ಕೂದಲು, ಸುಶೀಲ ಬಾ ಇಲ್ಲಿ ನನ್ನ ದೃಷ್ಟಿಯೇ ತಾಗುತ್ತದೆ ನಿನಗೆ’ ಎನ್ನುತ್ತಾ ನನ್ನ ದೃಷ್ಟಿ ತೆಗೆಯುತ್ತಿದ್ದರು ಅಕ್ಕ ಪಕ್ಕದ ಹೆಂಗಸರು. ಆದರೆ ಅಮ್ಮನ ಪ್ರೀತಿ ಇಲ್ಲದೇ ಹೋಯಿತಲ್ಲಾ ನನಗೆ ಎಂದು ಅನ್ನಿಸದ ದಿವಸವಿರಲಿಲ್ಲ. ಊರಿನಲ್ಲಿ ಶಾಲೆ ಇದ್ದುದರಿಂದ ಶಾಲೆ ಭಾಗ್ಯ ಸಿಕ್ಕಿತು ನನಗೆ. ಕಲಿಯುವುದರಲ್ಲಿ ಚುರುಕಿದ್ದುದರಿಂದಲೋ ಅಥವಾ ಮಾಸ್ತರರ ಶಿಫಾರಸು ಇದ್ದುದರಿಂದಲೋ ನನ್ನ ಓದಿಗೆ ಹೆಚ್ಚು ಅಡ್ಡ ಬರಲಿಲ್ಲ ಮನೆಯವರು. ಎಸ್.ಎಸ್.ಎಲ್.ಸಿ ಯಲ್ಲಂತೂ ರಾಜ್ಯಕ್ಕೇ ಎಂಟನೇ ರ್‍ಯಾಂಕೂ ಬಂತು. ಮುಂದೆ ಓದಿ ಬ್ಯಾಂಕ್ ಕೆಲಸಕ್ಕೆ ಸೇರುವ ಕನಸೂ ಕಂಡೆ. ನನ್ನ ಏಳಿಗೆ ಚಿಕ್ಕಮ್ಮನಿಗೆ ಸಹಿಸಲಾಗಲಿಲ್ಲವೋ ಏನೋ, ಎಲ್ಲಿಂದಲೋ ಒಬ್ಬ ವರನನ್ನು ಹುಡುಕಿ ತಂದು ಅಪ್ಪಯ್ಯನನ್ನು ಒಪ್ಪಿಸಿ ಮದುವೆ ಮಾಡಿಸಿಬಿಟ್ಟರು.

ನಾನು ಮೊದಲು ಬೆಂಗಳೂರು ನೋಡಿದ್ದು ಸುಧಾಕರನನ್ನು ಮದುವೆಯಾಗಿ ಬೆಂಗಳೂರಿಗೆ ಬಂದಾಗಲೇ. 18 ವರ್ಷದ ನನಗೆ 33 ವರ್ಷದ ಸುಧಾಕರ ಜೋಡಿ, ಚಿಕ್ಕಮ್ಮನ ದೂರದ ಸಂಬಂಧಿ, ಬೆಂಗಳೂರಿನಲ್ಲಿ ಗೂಡಂಗಡಿ ಇದೆ. ಹಲಸೂರಿನಲ್ಲಿ ರಾತ್ರಿ ಬಸ್ಸನ್ನು ಹತ್ತಿ ಬೆಳಿಗ್ಗೆ ಕಣ್ಣು ತೆರೆದಾಗ ಬೆಂಗಳೂರು ಬಂದಿತ್ತು. ಬೆಂಗಳೂರಿನ ಚಳಿ ಮೈ ಕೊರೆಯುತ್ತಿತ್ತು. ದೊಡ್ಡ ಊರಿನ ಚಿಕ್ಕ ಮನೆಯಲ್ಲಿದ್ದೆವು. ನಾನಂತೂ ಗಂಡನ ವಯಸ್ಸಿನ ಬಗ್ಗೆಯಾಗಲಿ, ಅವರ ಕೆಲಸದ ಬಗ್ಗೆಯಾಗಲಿ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ.

‘ರೀ ವಿಧಾನ ಸೌಧ, ಲಾಲ್‌ಬಾಗ್, ಕಬ್ಬನ್ ಪಾರ್ಕ್ ನೋಡಬೇಕು’ ಎಂದಾಗ ಸುಧಾಕರ ಕೈ ಹಿಡಿದುಕೊಂಡು ಊರೆಲ್ಲಾ ತಿರುಗಾಡಿಸಿದರು. ‘ರೀ ರೈಲು ಹತ್ತಬೇಕು’ ಎಂದಾಗ ಮೈಸೂರಿಗೂ ಹೋಗಿ ಬಂದೆವು. ‘ನನಗೆ ಗಂಡು ಮಗುವೇ ಬೇಕು, ಹೆಣ್ಣು ಮಕ್ಕಳು ಬೇಡವೇ ಬೇಡ, ನಾನು ಅನುಭವಿಸಿದ್ದೇ ಸಾಕು’ ಗಂಡನ ಕಿವಿಯಲ್ಲೆಂದಾಗ ದೇವರು ತಥಾಸ್ತು ಅಂದಿರಬೇಕು, ಮದುವೆಯಾಗಿ ಎರಡು ವರ್ಷದೊಳಗೆ ಗಂಡು ಮಗುವಾಯಿತು. ಯಾರು ಹೇಳಿದರು ಮದುವೆಯಾಗಿ ಸಂಸಾರ ಮಾಡಲು ಮತ್ತು ಹೊಂದಾಣಿಕೆಯಿಂದ ಇರಲು ಗಂಡ ಹೆಂಡತಿಯ ನಡುವೆ ಹೆಚ್ಚು ವಯಸ್ಸಿನ ಅಂತರವಿರಬಾರದೆಂದು. ಸುಮಾರು 15 ವಯಸ್ಸಿನ ಅಂತರವಿದ್ದರೂ ನಾವು ಜೋಡಿ ಹಕ್ಕಿಗಳಿಂತಿದ್ದೆವು. ಮದುವೆ ಮಾಡಿಸಿದ ಚಿಕ್ಕಮ್ಮನಿಗೆ ಮನದಲ್ಲೇ ಈ ವಿಷಯದಲ್ಲಿ ಹಲವು ಸಲ ಕೃತಜ್ಞತೆ ಸಲ್ಲಿಸಿದ್ದೂ ಇದೆ.

ಒಂದು ದಿನ ಸುಧಾಕರ ರಾತ್ರಿ 9 ಗಂಟೆಯಾದರೂ ಮನೆಗೆ ಬಾರದಿದ್ದಾಗ ನಾನು ಬಾಗಿಲಲ್ಲೇ ಮಗನನ್ನು ಎತ್ತಿಕೊಂಡು ಕಾಯುತ್ತಿದ್ದೆ. ಆಗ ಓಡುತ್ತಾ ಬಂದ ಪಕ್ಕದ ಮನೆಯ ಹುಡುಗ ‘ಅಕ್ಕ, ಸುಧಾಕರಣ್ಣನಿಗೆ ಯಾರೋ ಚೂರಿ ಹಾಕಿದ್ದಾರೆ, ರಸ್ತೆಯಲ್ಲೇ ಬಿದ್ದಿದ್ದಾರೆ’ ಎಂದಾಗ ನಾನು ತಲೆ ತಿರುಗಿ ಬೀಳುವುದೊಂದು ಬಾಕಿ. ಸುಧಾಕರನಿಗೆ ಶತ್ರು ಯಾರು, ಯಾಕಾಗಿ ಚೂರಿ ಹಾಕಿದ್ದಾರೆಂದು ತಿಳಿಯದಾದೆ. ಅಕ್ಕಪಕ್ಕದವರ ಸಹಾಯದಿಂದ ಸುಧಾಕರನನ್ನು ಆಸ್ಪತ್ರೆಗೆ ಸೇರಿಸಿಯಾಯಿತು. ಆಸ್ಪತ್ರೆ ಸೇರಿದ ಸ್ವಲ್ಪ ಹೊತ್ತಿನಲ್ಲೇ ಸುಧಾಕರ ಕಣ್ಣು ಮುಚ್ಚಿದರು. ನನಗೆ 22 ವರ್ಷ ತುಂಬುವುದರೊಳಗೆ ಮದುವೆ, ಮಗು, ವಿಧವೆ ಹೀಗೆ ಜೀವನದ ಹಲವು ಮೆಟ್ಟಿಲುಗಳನ್ನು ಒಮ್ಮೆಲೆ ಹತ್ತಿದೆ. ಸುಧಾಕರನ ವಿಮೆಯ ಸಣ್ಣ ಮೊತ್ತದ ಹಣ ಸಿಕ್ಕಿ ಕೈಯಲ್ಲಿ ಕಾಸು ಕಾಣಿಸುವಂತಾಯಿತು. ಪಕ್ಕದ ಮನೆಯವರಾರೊ ಟೀಚರ್ಸ್ ಟ್ರೈನಿಂಗ್ ಸ್ಕೂಲಿಗೆ ನನ್ನನ್ನು ಸೇರಿಸಿ ಉಪಕಾರ ಮಾಡಿದರು. ಹೇಗೋ ಒಂದು ವರ್ಷದ ಕೋರ್ಸು ಮುಗಿಸಿ ಒಂದು ಪ್ರೈವೇಟ್ ಸ್ಕೂಲಿನಲ್ಲಿ ಟೀಚರ್ ಕೆಲಸಕ್ಕೆ ಸೇರಿಕೊಂಡೆ.

ಕೆಲಸಕ್ಕೆ ಸೇರಿದ ಮೇಲೆ ಖರ್ಚಿನ ಸಮಸ್ಯೆ ಸ್ವಲ್ಪಮಟ್ಟಿಗೆ ಬಗೆ ಹರಿಯಿತು. ಆದರೆ ಚಿಕ್ಕ ವಯಸ್ಸಿನ ವಿಧವೆಗೆ ತೊಂದರೆಗಳು ಎದುರಾಗಲಿಲ್ಲ ವೆಂದರೆ ಅದು ಸುಳ್ಳಾಗುತ್ತದೆ, ಸಹ ಅಧ್ಯಾಪಕ, ಹೆಡ್ ಮಾಸ್ಟರ್, ಟ್ರಸ್ಟಿ, ಪಕ್ಕದ ಮನೆಯ ಹುಡುಗ, ಎಲೆಕ್ಟ್ರಿಕ್ ಮೀಟರ್ ರೀಡಿಂಗಿನವ, ಹಾಲು ಹಾಕುವವ, ಮಗನ ಶಾಲೆಯ ಅಧ್ಯಾಪಕ.. ಹೀಗೆ ಹತ್ತಾರು ಜನರು ನನ್ನ ಹಿಂದೆ ಬಿದ್ದು ಹಲವು ತೊಂದರೆಗಳನ್ನು ಅನುಭವಿಸ ಬೇಕಾಗಿ ಬಂತು. ಅದಕ್ಕಾಗಿ ಹಲವು ಸಲ ಕೆಲಸ ಬದಲಾಯಿಸಿ ಯಾಯಿತು. ಕಡೆಗೆ ಸರಕಾರಿ ಶಾಲೆಯಲ್ಲಿ ಕೆಲಸ ಸಿಕ್ಕಾಗ, ತೊಂದರೆಗಳು ಕಡಿಮೆಯಾದವೋ, ಇಲ್ಲವೇ ತೊಂದರೆಗಳನ್ನು ಬಗೆಹರಿಸುವ ಉಪಾಯ ವನ್ನು ಕಂಡುಕೊಂಡೆನೋ ಗೊತ್ತಿಲ್ಲ.

ಮಗ ಆಕಾಶನ ಮುಖ ನೋಡಿ ಎಲ್ಲಾ ದುಃಖವನ್ನು ಮರೆಯುತ್ತಿದ್ದೆ. ಮಗ ಎಲ್ಲದರಲ್ಲೂ ಚುರುಕು. ‘ಅಮ್ಮ ನಾನು ದೊಡ್ಡವನಾದ ಮೇಲೆ ದೊಡ್ಡ ಕಾರು ತಗೊಂಡು ನಿನ್ನನ್ನು ಕಾರಲ್ಲಿ ಕರೆದುಕೊಂಡು ಹೋಗುತ್ತೇನೆ’ ಎನ್ನುತ್ತಿದ್ದ. ಅಮ್ಮ ಕಳೆದು ಹೋಗಬಾರದೆಂದು ಗಟ್ಟಿಯಾಗಿ ಅಮ್ಮನ ಕೈಹಿಡಿದು ಮುಂದೆ ನಡೆಯುವ ಮಗನ ಬಗ್ಗೆ ಯಾವ ತಾಯಿಗೆ ಹೆಮ್ಮೆಯಾಗುವುದಿಲ್ಲ. ಆಕಾಶ ಐದನೆಯ ಕ್ಲಾಸಿನಲ್ಲಿದ್ದಿರಬೇಕು, ಆಗ ಹೊಸದಾಗಿ ಟ್ರಾನ್ಸ್‌ಫರ್ ಆಗಿ ಬಂದ ಪಿ.ಟಿ. ಅಧ್ಯಾಪಕ ದಿನಕರ ಸರ್ ಹತ್ತಿರವಾಗತೊಡಗಿದರು. ಮಾತು ಮಾತಿಗೂ ಕಣ್ಣಲ್ಲಿ ನೀರು ಬರುವಂತೆ ನಗಿಸುವ ದಿನಕರರ ಮಾತು ಕೇಳಿ ಮನಸಾರೆ ನಗುವುದನ್ನು ಕಲಿತೆ. ‘ಮೇಡಂ ಜೀವನದುದ್ದಕ್ಕೂ ನನ್ನೊಡನೆ ಹೀಗೆ ನಗುತ್ತೇನೆ ಎಂದು ಪ್ರಾಮಿಸ್ ಮಾಡಿ’ ಎಂದು ಕಣ್ಣಲ್ಲಿ ಕಣ್ಣಿಟ್ಟು ಅಂದಾಗ ‘ಅದು ನಕ್ಕಂತೆ ಅಲ್ಲಾ, ನನ್ನ ಬಗ್ಗೆ ನಿಮಗೇನು ಗೊತ್ತು?’ ಎನ್ನುತ್ತಾ ನಾನು ನನ್ನ ಬಗ್ಗೆ ಹೇಳಿಕೊಂಡೆ. ಅದಕ್ಕೂ ದಿನಕರ ನಗುತ್ತಾ ‘ಅಷ್ಟೇನಾ? ನಾನು ಅನಾಥ, ನನಗೆ ಹೆಂಡತಿಯೊಟ್ಟಿಗೆ ಮಗನೂ ಸಿಕ್ಕರೆ ಮನೆ ತುಂಬಿದಂತಯೇ’ ಎನ್ನುತ್ತಾ ಮದುವೆಯ ದಿನವನ್ನು ಗೊತ್ತು ಮಾಡಿದರು. ಜೀವನವಿಡೀ ಗಂಡಿನ ಆಸರೆಯಿಲ್ಲದೆ ಇರಬಹುದು. ಆದರೆ ಆಸರೆ ನೀಡಲು ಹೆಗಲು ಸಿಕ್ಕಾಗ ಏಕೆ ತಿರಸ್ಕರಿಸಬೇಕೆಂದು ಅನ್ನಿಸಿತು. ಮಗನೂ ದಿನಕರ ಮಾಮನನ್ನು ಇಷ್ಟಪಟ್ಟಾಗ ನಾನು ಮದುವೆಗೆ ಹೂಂ ಎಂದೆ. ಸ್ವಲ್ಪ ದಿನ ನಾನು, ದಿನಕರ ಮುಂದಿನ ಜೀವನದ ಬಗ್ಗೆ ಹಲವು ಕನಸುಗಳನ್ನು ಹೆಣೆದೆವು, ರಿಜಿಸ್ಟರ್ ಮದುವೆಯಾಗಲು ತೀರ್ಮಾನಿಸಿದೆವು. ಆದರೆ ಮದುವೆಯ ಹಿಂದಿನ ದಿನ ನನ್ನ ಹತ್ತಿರ ಮಲಗಿದ ಮಗ, ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡು ‘ಅಮ್ಮ ದಿನಕರ ಮಾಮ ಅವರ ಮನೆಯಲ್ಲಿ ಇರಲಿ, ನಾವಿಬ್ಬರೇ ಇಲ್ಲಿಯೇ ಇರೋಣ’ ಎಂದಾಗ ಮೊದಲೇ ಮದುವೆಗೆ ಅಳೆದು ಸುರಿಯುತ್ತಿದ್ದ



**ಆಚರಣೆ**

ಈಶ್ವರ

ಆಚರಣೆಗೆ
ಬಡಿಯ ಬಾರದು ಬರ
ಎಂದು ಅಡವಿಟ್ಟು
ಪತ್ನಿಯ ಸರ
ಆಚರಿಸಿಕೊಂಡೆ
ನಾ ದಸರಾ...

★ ಭಾಸ್ಕರ ಕೆ. ಕುಂಟಪದವು